# ಹುತಾತ್ಮ ಬಾಲಕ

**ಅ) ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. (Answer the following in one sentence)**

**೧. ಬ್ರಿಟೀಷರಿಗೆ ಭಾರತವನ್ನು ಬಿಟ್ಟು ತೊಲಗಿ ಎಂದು ಎಚ್ಚರಿಕೆ ಕೊಟ್ಟವರು ಯಾರು?**

ಉ: ಬ್ರಿಟೀಷರಿಗೆ ಭಾರತವನ್ನು ಬಿಟ್ಟು ತೊಲಗಿ ಎಂದು ಎಚ್ಚರಿಕೆ ಕೊಟ್ಟವರು ಗಾಂಧೀಜಿಯವರು.

**೨. ಹುಬ್ಬಳ್ಳಿಯ ಜನತೆಗೆ ಪ್ರಮುಖವಾಗಿದ್ದ ದಿನ ಯಾವುದು?**

ಉ: ೧೯೪೨ರ ಆಗಸ್ಟ್ ೧೫ ಹುಬ್ಬಳ್ಳಿಯ ಜನತೆಗೆ ಪ್ರಮುಖವಾಗಿದ್ದ ದಿನ.

**೩. ನಾರಾಯಣನ ತಾಯಿ ಏನೆಂದು ಮಗನನ್ನು ಹರಸಿದಳು?**

ಉ: ನಾರಾಯಣನ ತಾಯಿ ' ದೇವರು ನಿನಗೆ ಒಳ್ಳೆಯದು ಮಾಡಲಿ ' ಎಂದು ಮಗನನ್ನು ಹರಸಿದಳು.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

**೪. ನಾರಾಯಣನು ಕೂಗಿದ ಘೋಷಣೆ ಯಾವುದು?**

ಉ: ' ಬ್ರಿಟೀಷರೇ ಭಾರತ ಬಿಟ್ಟು ತೊಲಗಿ ' ಎಂಬ ಘೋಷಣೆಯನ್ನು ನಾರಾಯಣನು ಕೂಗಿದನು.

**೫. ಸಾವಿನ ಅಂಚಿನಲ್ಲಿದ್ದ ಬಾಲಕ ಏನನ್ನು ಕೇಳಿದ?**

ಉ: ಸಾವಿನ ಅಂಚಿನಲ್ಲಿದ್ದ ಬಾಲಕ ' ಸ್ವರಾಜ್ಯ' ಬೇಕೆಂದು ಕೇಳಿದ.

**ಆ) ಎರಡು / ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (Answer the following in two - three sentences)**

**೧. ಬಾಲಕ ನಾರಾಯಣ ಮುಂಜಾನೆ ಎದ್ದು ಹೇಗೆ ಸಿದ್ಧನಾದನು ?**

ಉ: ಬಾಲಕ ನಾರಾಯಣ ಮುಂಜಾನೆ ಬೇಗನೇ ಎದ್ದು ಸ್ನಾನ ಮಾಡಿದನು. ಖಾದಿ ಚಡ್ಡಿ , ಅಂಗಿ ಮತ್ತು ಗಾಂಧಿ ಟೋಪಿಯನ್ನು ಧರಿಸಿದನು. ಮನೆಯ ಬೀರುವಿನಲ್ಲಿದ್ದ

ತ್ರಿವರ್ಣದ ಧ್ವಜವನ್ನು ತೆಗೆದುಕೊಂಡು ಬ್ರಿಟೀಷರ ವಿರುದ್ಧ ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗವಹಿಸಲು ಸಿದ್ಧನಾದನು.

**೨. ನಾರಾಯಣನ ತಾಯಿ ಏಕೆ ಅಚ್ಚರಿಗೊಂಡಳು?**

ಉ: " ಅಮ್ಮಾ, ಬ್ರಿಟೀಷರ ವಿರುದ್ಧ ಪ್ರತಿಭಟನಾ ಮೆರವಣಿ ನಡೆಯುತ್ತಿದೆ. ಅದಕ್ಕೆ ನಾನು ಹೋಗುತ್ತಿದ್ದೇನೆ " ಎಂದು ನಾರಾಯಣ ಹೇಳಿದನು. " ಮಗು, ನೀನು ಇನ್ನೂ ಚಿಕ್ಕವನು. ದೊಡ್ಡವರ ಮೆರವಣಿಗೆಯಲ್ಲಿ ನೀನು ಹೇಗೆ ಹೋಗುತ್ತೀಯಾ? " ಎಂದು ತಾಯಿ ಕೇಳಿದಳು. ಅದಕ್ಕೆ ಅವನು " ಅಮ್ಮ, ಹಿರಿಯರು, ಕಿರಿಯರು ಎನ್ನುವುದು ಮುಖ್ಯವಲ್ಲ, ಭಾರತ ಮಾತೆಯ ಸೇವೆಯನ್ನು ಹೇಗೆ ಮಾಡುತ್ತೇವೆ ಎನ್ನುವುದೇ ಮುಖ್ಯ " ಎಂದು ಹೇಳಿದನು. ಮಗನ ಈ ರೀತಿಯ ಮಾತನ್ನು ಕೇಳಿ ತಾಯಿ ಅಚ್ಚರಿಗೊಂಡಳು.

**೩. ಪೊಲೀಸರು ಸಿಟ್ಟಿನಿಂದ ಏಕೆ ಕುದಿಯುತ್ತಿದ್ದರು?**

ಉ: ದುರ್ಗದ ಬಯಲಿನಲ್ಲಿ ನಡೆದ ಮೆರವಣಿಗೆಯಲ್ಲಿ ನಾರಾಯಣ ತಾರಕ ಸ್ವರದಲ್ಲಿ " ಬ್ರಿಟೀಷರೇ ಭಾರತ ಬಿಟ್ಟು ತೊಲಗಿ " ಎಂದು ಘೋಷಣೆ ಕೂಗುತ್ತಿದ್ದನು. ಇತರರು ಅವನ ಕೂಗನ್ನು ಪ್ರತಿಧ್ವನಿಸುತ್ತಿದ್ದರು. ಇದನ್ನು ಕಂಡ ಪೊಲೀಸರು ಸಿಟ್ಟಿನಿಂದ ಕುದಿಯುತ್ತಿದ್ದರು.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

## ಇ) ಈ ಮಾತನ್ನು ಯಾರು? ಯಾರಿಗೆ ಹೇಳಿದರು? (Who told whom)

**೧. " ಎಲ್ಲಿಗೆ ಹೋಗುತ್ತಿರುವೆ ಮಗು ? "**

ಯಾರು? : ತಾಯಿ ಹೇಳಿದಳು.

ಯಾರಿಗೆ? : ನಾರಾಯಣನಿಗೆ ಹೇಳಿದಳು.

**೨. " ಅಮ್ಮ ಹಿರಿಯರು ಕಿರಿಯರು ಎನ್ನುವುದು ಮುಖ್ಯವಲ್ಲ "**

ಯಾರು? : ನಾರಾಯಣ ಹೇಳಿದನು.

ಯಾರಿಗೆ? : ತಾಯಿಗೆ ಹೇಳಿದನು.

**೩. " ನಿನಗೆ ಏನು ಬೇಕು? "**

ಯಾರು? : ಆಂಗ್ಲ ಅಧಿಕಾರಿ ಕೇಳಿದನು.

ಯಾರಿಗೆ? : ನಾರಾಯಣನನ್ನು ಕೇಳಿದನು.

## ಭಾಷಾ ಚಟುವಟಿಕೆ

### ಅ) ಕೊಟ್ಟಿರುವ ಪದ ಗಮನಿಸಿ ವಿರುದ್ಧಾರ್ಥಕ ಪದ ಬರೆಯಿರಿ. (Write the opposite words)

ಅಹಿಂಸೆ X ಹಿಂಸೆ

ಕಿರಿಯ X ಹಿರಿಯ

ಸಾಧ್ಯ X ಅಸಾಧ್ಯ

ಬೇಕು X ಬೇಡ

I FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

### ಆ) ಮಾದರಿಯಲ್ಲಿ ಸೂಚಿಸಿರುವಂತೆ ಪದ ಬಿಡಿಸಿ ಬರೆಯಿರಿ. (Split the word)

**ಮಾದರಿ** : ಧೈರ್ಯ + ವಂತ

೧. ಗುಣವಂತ = ಗುಣ + ವಂತ

೨. ಶೌರ್ಯವಂತ = ಶೌರ್ಯ + ವಂತ

೩. ಶಕ್ತಿವಂತ = ಶಕ್ತಿ + ವಂತ

೪. ಬುದ್ಧಿವಂತ = ಬುದ್ಧಿ + ವಂತ

೫. ಹಣವಂತ = ಹಣ + ವಂತ

**ಇ) ಕೊಟ್ಟಿರುವ ಪದಗಳನ್ನು ಬಳಸಿ ಸಂತ ವಾಕ್ಯ ರಚಿಸಿ. (Make your own sentence)**

**ಘೋಷಣೆ** = ಬಾಲಕ ನಾರಾಯಣ ' ಬ್ರಿಟೀಷರೇ ಭಾರತ ಬಿಟ್ಟು ತೊಲಗಿ ' ಎಂಬ ಘೋಷಣೆ ಕೂಗುತ್ತಿದ್ದನು .

**ಅಹಿಂಸೆ** : ಗಾಂಧೀಜಿಯವರು ಅಹಿಂಸೆಯ ಮಾರ್ಗವನ್ನು ಅನುಸರಿಸಿದರು.

**ಜೋರಾಗಿ** = ನಾರಾಯಣನು ಜೋರಾಗಿ ಘೋಷಣೆ ಕೂಗುತ್ತಿದ್ದರು.

**ಆಶ್ಚರ್ಯ** = ಬಾಲಕನ ಮಾತು ಕೇಳಿ ಅವನ ತಾಯಿ ಆಶ್ಚರ್ಯದಿಂದ ನೋಡಿದಳು.

**ಮೆರವಣಿಗೆ** = ಬಾಲಕ ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗವಹಿಸಿದನು.

**ಈ) ಈ ಕೆಳಗಿನ ಪದಗಳಿಗೆ ನುಡಿ ಕಣಜದಿಂದ ಅರ್ಥ ಹುಡುಕಿ ಬರೆಯಿರಿ. (Write the synonyms)**

ನೆರವು : ಸಹಾಯ , ಬೆಂಬಲ , ಆಸರೆ

ಹರಸು = ಆಶೀರ್ವದಿಸು, ಅನುಗ್ರಹಿಸು

ಅದ್ಭುತ = ಆಶ್ಚರ್ಯ, ವಿಸ್ಮಯ

ಕಸುಬು = ಕೆಲಸ, ಉದ್ಯೋಗ

FOR KANNADA ಕನ್ನಡಕ್ಕಾಗಿ ಇಲ್ಲಿ ಬನ್ನಿ

## ಬಳಕೆ ಚಟುವಟಿಕೆ

**ಅ) ವೃತ್ತದೊಳಗಿನ ಪದವನ್ನು ಅದರ ಸಮಾನಾರ್ಥಕ ಪದಗಳೊಂದಿಗೆ ಗೆರೆ ಎಳೆದು ಜೋಡಿಸಿ.**









ಆ) ಕೊಟ್ಟಿರುವ ಅಕ್ಷರ ಬಳಸಿ ಪದ ರಚಿಸಿ , ಅಕ್ಷರ ಬಂಧ ಪೂರ್ಣಗೊಳಿಸು .
ರಚನೆಯಾದ ಖಾಲಿ ಜಾಗದಲ್ಲಿ ಬರೆದಿದೆ. ( ಡೆ , ಣ , ರ , ನೆ , ವು )

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

